**ಸಿ.ಸಿ- 27/2016**
**ಪಿ. ಡಬ್ಲೂ-41**

**ಇಂದು ದಿ:04-03-2021 ರಂದು ಸಾಕ್ಷಿ ಹಾಜರು ಇದ್ದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲು ಆರೋಪಿ ಪರ: ಶ್ರೀ ಆರ್.ಪಿ. ವಕೀಲರಿಂದ:**

ನಾನು ಎಂ.ಎ, ಬಿ.ಎಡ್ ಓದಿರುತ್ತೇನೆ. ನಮ್ಮ ಕಡೆ ಎಲ್ಲಾ ಬೆದ್ದಲು ಜಮೀನು ಎಂದರೆ ಸಾಕ್ಷಿ ಪಂಪ್ ಸೆಟ್ ಹಾಕಿಕೊಂಡು ನೀರಾವರಿ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ರೈತರು ತಾವು ಬೆಳೆದಂತಹ ಬೆಳೆಯನ್ನು ಎ.ಪಿ.ಎಂ.ಸಿಯ ಮೂಲಕ ಮಾರಾಟ ಮಾಡಬೇಕು ಎಂದು ಕಾನೂನು ಇರತ್ತುದೆ ಎಂದರೆ ಸಾಕ್ಷಿ ನಿಜ ಆರೋಪಿ ಮಧ್ಯವರ್ತಿ ಇರುತ್ತಾರೆ ಎಂದು ಹೇಳುತ್ತಾರೆ. ಆರೋಪಿ ಮಧ್ಯವರ್ತಿಯಾಗಿ ನಾಗೇಶ್ವರ್ ರಾವ್ ಗೆ ಭತ್ತವನ್ನು ಕೊಡಿಸಿರುತ್ತಾನೆ. ಭತ್ತ ಖರೀದಿ ಮಾಡಿದ ಖರೀದಿ ರಸೀದಿಯನ್ನು ಪೋಲೀಸರಿಗೆ ಕೊಟ್ಟಿಲ್ಲ. ಆರೋಪಿ ಊರು ಬಿಟ್ಟು ಹೋಗಿರುತ್ತಾನೆ ಎಂದು ನನಗೆ ಸುರೇಶಪ್ಪ ಹೇಳಿರುತ್ತಾನೆ. ಸುರೇಶಪ್ಪ ಯಾವ ಊರಿನವನೆಂದು ಗೊತ್ತಿರುವುದಿಲ್ಲ. ಸರ್ವೆ ನಂಬರ್ 63 ರ ಜಮೀನನ್ನು ನಾನು ಲಾವಣಿ ಮಾಡುತ್ತಿದ್ದ ಕುರಿತು ಪೋಲೀಸರಿಗೆ ಲಾವಣಿ ಪತ್ರವನ್ನು ಕೊಟ್ಟಿರುತ್ತೇನೆ. ಈ ಕೇಸು ಆಗುವ ಸಮಯದಲ್ಲಿ ಕೊಟ್ಟಿದ್ದೆ. ನಿಪಿ 26 ರಲ್ಲಿ ನೀರಿನ ಮೂಲ ಮತ್ತು ಬೆಳೆದಿರುವಂತಹ ಬೆಳೆಯ ವಿವರ ನಮೂದಿಲ್ಲ ಎನ್ನುವುದು ನಿಜ. ಒಬ್ಬ ರೈತ ತಾನು ಏನು ಬೆಳೆಯನ್ನು ಬೆಳೆದಿರುತ್ತಾನೆ ಮತ್ತು ನೀರಿನ ಮೂಲ ಪಹಣಿಯಲ್ಲಿ ನಮೂದಿರುತ್ತದೆ ಎಂದರೆ ಸಾಕ್ಷಿ ನಿಜ ನಾವು ಮಾಡಿಸಿಲ್ಲ ಎಂದು ಹೇಳುತ್ತಾರೆ. 2009-10 ರ ಸಾಲಿನಲ್ಲಿ ನಾನು ಭತ್ತ ಬೆಳೆದಿದ್ದೆ ಎನ್ನುವುದಕ್ಕೆ ಗ್ರಾಮ ಲೆಕ್ಕಾಧಿಕಾರಿಯಿಂದ ದೃಢೀಕರಣ ಪತ್ರವನ್ನು ತಂದು ಕೊಟ್ಟಿಲ್ಲ. ಆರೋಪಿಗೆ 67 ಚೀಲ ಭತ್ತ ಕೊಟ್ಟ ಕುರಿತು ಖರೀದಿ ರಸೀದಿಯನ್ನು ಹಾಜರುಪಡಿಸಿಲ್ಲ. 2010 ರಲ್ಲಿ ನಾನು ಯಾವುದೇ ಭತ್ತವನ್ನು ಬೆಳೆದಿಲ್ಲ ಹಾಗೂ ಆರೋಪಿಗೆ ನಾನು ಯಾವುದೇ ಭತ್ತವನ್ನು ಮಾರಾಟ ಮಾಡಿಲ್ಲ ಮತ್ತು ಆರೋಪಿ ನನಗೆ ಯಾವುದೇ ಹಣ ಕೊಡುವುದು ಬಾಕಿ ಇಲ್ಲ ಎಂದರೆ ಸರಿಯಲ್ಲ. ರೈತ ಸಂಘದವರ , ಕುಣೆಬೆಳೆಕೆರೆಯ ಬೆಳೆಕೆರಪ್ಪ ಮತ್ತು ಪೋಲೀಸರ ಮಾತನ್ನು ಕೇಳಿ ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 27 ಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ.**

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೆ ಸರಿ ಇದೆ.

ಸಹಿ/-
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ,**
**ಜೆ.ಎಂ.ಎಫ್.ಸಿ, ಹರಿಹರ.**